# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
# Visvesvaraya Technological University
**"Jnana Sangama", Belagavi - 590 018, Karnataka State**

**Prof. A. S Deshpande** B.E., M.Tech., Ph.D.
**REGISTRAR**

**Phone:** (0831)2498100
**Fax:** (0831)2405467


ಉಲ್ಲೇಖ: ವಿತಾವಿ/ಬೆಳಗಾವಿ/ಗ್ರಂಥಾಲಯ/2019–20/೨೮೬೦ ದಿನಾಂಕ: 27 FEB 2020

## ಸುತ್ತೋಲೆ

**ವಿಷಯ:** ವಿಟಿಯುನ ಸ್ವಾಯತ್ತ, ಅಂಗಸಂಸ್ಥೆ ಮತ್ತು ಘಟಕ ಕಾಲೇಜುಗಳಲ್ಲಿ ಕೆಲಸ ಮಾಡುವ ಗ್ರಂಥಪಾಲಕರನ್ನು ಬೋಧನಾ ಸಿಬ್ಬಂದಿಗಳಂತೆ ಪರಿಗಣಿಸುವ ಕುರಿತು.

**ಉಲ್ಲೇಖ:** ಕರ್ನಾಟಕ ರಾಜ್ಯಪತ್ರ ಸಂಖ್ಯೆ: ಸಂವ್ಯಶಾಇ 02 ಶಾಸನ 2020 ದಿನಾಂಕ 17ನೇ ಜನೆವರಿ 2020.

*****

ಮೇಲ್ಕಾಣಿಸಿದಂತೆ, ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 02 ಶಾಸನ 2020 ದಿನಾಂಕ 17ನೇ ಜನೆವರಿ 2020 ಪ್ರಕಾರ "ಶಿಕ್ಷಕ" ಎಂಬುದು ಗ್ರಂಥಪಾಲಕರನ್ನು ಸಹ ಒಳಗೊಂಡಿರುವುದೆಂದು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

**"ಶಿಕ್ಷಕ" ಎಂದರೆ ಪ್ರಾಧ್ಯಾಪಕ, ಸಹಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ, ಉಪನ್ಯಾಸಕ, ಗ್ರಂಥಪಾಲಕರು, ರೀಡರ್ ಅಥವಾ ದೈಹಿಕ ಶಿಕ್ಷಣ ಸಿಬ್ಬಂದಿ ಎಂಬ ಯಾವುದೇ ಹೆಸರಿನಿಂದ ಕರೆಯಲಾಗುವ ಬೋಧಕ ಹುದ್ದೆಗಳ ಯಾವುದೇ ವರ್ಗಕ್ಕೆ ನೇಮಿಸಿದ ವ್ಯಕ್ತಿ ಮತ್ತು ಅನುಕ್ರಮವಾಗಿ ಯುಜಿಸಿ/ಐಸಿಎಆರ್/ಎಐಸಿಟಿಇ ಅಥವಾ ಮಾರ್ಪಾಡಿತ ಎಐಸಿಟಿಇ ವೇತನ ಶ್ರೇಣಿಯ ಹುದ್ದೆಯನ್ನು ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಾಂಶುಪಾಲ, ಅಥವಾ ಸಂಸ್ಥೆಯ ಮುಖ್ಯಸ್ಥರನ್ನು ಸೇರಿಕೊಂಡ ಎಲ್ಲಾ ಸಿಬ್ಬಂದಿಯನ್ನು ಒಳಗೊಳ್ಳುವುದು;**

ಆದ್ದರಿಂದ, ವಿತಾವಿಯ ಎಲ್ಲಾ ಸ್ವಾಯತ್ತ, ಅಧೀನ ಮತ್ತು ಘಟಕ ಕಾಲೇಜುಗಳು ತಮ್ಮ ಗ್ರಂಥಪಾಲಕರನ್ನು ಬೋಧನಾ ಸಿಬ್ಬಂದಿಗಳಂತೆ ಪರಿಗಣಿಸಿ ಶಿಕ್ಷಕರಿಗೆ ನೀಡಲಾಗುವ ಎಲ್ಲಾ ಸ್ಥಾನಮಾನ ಮತ್ತು ಸೌಲಭ್ಯಗಳನ್ನು ಒದಗಿಸಿ ಹಾಗೂ ಗ್ರಂಥಪಾಲಕರ ಹಾಜರಾತಿಯನ್ನು ಶಿಕ್ಷಕರ ಹಾಜರಾತಿಗಳಲ್ಲಿ ಸೇರಿಸಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ಸಹಿ/–

**ಕುಲಸಚಿವರು**

**ಅಡಕ: ಮೇಲಿನಂತೆ.**

**ಗೆ,**

ಪ್ರಾಂಶುಪಾಲರು,
ವಿತಾವಿಯ ಅಧೀನ (ಸ್ವಾಯತ್ತ, ಅಂಗಸಂಸ್ಥೆ ಮತ್ತು ಘಟಕ) ಕಾಲೇಜುಗಳು

**ಪ್ರತಿ ಮಾಹಿತಿಗಾಗಿ:**

1] ಮಾನ್ಯ ಕುಲಪತಿಗಳು, ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ ವಿತಾವಿ ಬೆಳಗಾವಿ.

2] ನಿರ್ದೇಶಕರು, ಡಿ.ಟಿ.ಇ. ಕರ್ನಾಟಕ ಸರ್ಕಾರ, ಬೆಂಗಳೂರು.

3] ಕುಲಸಚಿವರು (ಮೌಲ್ಯಮಾಪನ) ವಿತಾವಿ, ಬೆಳಗಾವಿ.

4] ಹಣಕಾಸು ಅಧಿಕಾರಿಗಳು ವಿತಾವಿ, ಬೆಳಗಾವಿ.

5] ಸಂಯೋಜಕರು, ವಿತಾವಿಯ ಎಲ್ಲ ಸ್ನಾತ್ತಕೋತ್ತರ ಅದ್ಯಯನ ಕೇಂದ್ರಗಳು.

6] ನಿರ್ದೇಶಕರು. ವಿತಾವಿಯ ಎಲ್ಲ ಪ್ರಾದೇಶಿಕ ಕೇಂದ್ರಗಳು (ಬೆಳಗಾವಿ. ಮುದ್ದೇನಹಳ್ಳಿ.ಮೈಸೂರು. ಕಲಬುರ್ಗಿ) ಮಾಹಿತಿಗಾಗಿ ಮತ್ತು ತಮ್ಮ ಅಧೀನ ಕಾಲೇಜುಗಳಿಗೆ ಕಳುಹಿಸುವುದು.

7] ವಿಶೇಷ ಅಧಿಕಾರಿಗಳು, ಶೈಕ್ಷಣಿಕ (ಸಂಯೋಜನೆ) ವಿಭಾಗ, ವಿತಾವಿ, ಬೆಳಗಾವಿ.

8] ವಿಶೇಷ ಅಧಿಕಾರಿಗಳು, ಡಿಪಿಎಆರ್, ವಿತಾವಿ, ಬೆಳಗಾವಿ.

9] ಕಚೇರಿ ಮೇಲ್ವಿಚಾರಕರು. ಶೈಕ್ಷಣಿಕ ವಿಭಾಗ, ಬೆಳಗಾವಿ.

10] ಪ್ರಕರಣ ಕೆಲಸಗಾರರು ಶೈಕ್ಷಣಿಕ ವಿಭಾಗ, ವಿತಾವಿ, ಬೆಳಗಾವಿ. (A1,A2,A3,A4,A5,A6,A7,A8,A9)

11] ವಿಶೇಷ ಅಧಿಕಾರಿಗಳು ಸಿಎನಸಿ, ವಿತಾವಿ, ಬೆಳಗಾವಿ ಇವರಿಗೆ ವಿತಾವಿ ಅಂತರ್ಜಾಲದಲ್ಲಿ ಪ್ರಕಟಿಸುವದು.

12] ಗ್ರಂಥಪಾಲಕರು, ವಿತಾವಿ, ಬೆಳಗಾವಿ ಸೂಕ್ತ ಕ್ರಮಕ್ಕಾಗಿ.

21/12/2020

**ಕುಲಸಚಿವರು**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ– IVA<br>Part -IVA | ಬೆಂಗಳೂರು, ಶುಕ್ರವಾರ, ೧೭, ಜನವರಿ, ೨೦೨೦ (ಪುಷ್ಯ ೨೭, ಶಕವರ್ಷ ೧೯೪೧)<br>Bengaluru, FRIDAY, JANUARY, 17, 2020 ( Pushya 27, ShakaVarsha 1941) | ನಂ.೧೬<br>No.16 |
|---|---|---|


**ಕರ್ನಾಟಕ ಸರ್ಕಾರ**

ಸಂಖ್ಯೆ: ಸಂವ್ಯಶಾಇ 02 ಶಾಸನ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 17.01.2020

**ಅಧಿಸೂಚನೆ**

ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ಅಧ್ಯಾದೇಶ, 2020 ಇದಕ್ಕೆ 2020ರ ಜನವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 1 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 1**

**ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಜನವರಿ 17ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಸರ್ಕಾರಿ ಕಾಲೇಜುಗಳಲ್ಲಿ, ಕಾನೂನಿನ ಮೂಲಕ ಸ್ಥಾಪನೆಯಾದ ವಿಶ್ವವಿದ್ಯಾಲಯಗಳಲ್ಲಿ ಹಾಗೂ ರಾಜ್ಯ ಸರ್ಕಾರದ ನಿಯಂತ್ರಣದಡಿಯಲ್ಲಿರುವ ಸರ್ಕಾರಿ ಅನುದಾನಿತ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಅನ್ವಯವಾಗುವ ವೇತನ, ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳನ್ನು ನಿಯಂತ್ರಿಸಲು ಒಂದು ಅಧ್ಯಾದೇಶ.

ಭಾರತ ಸಂವಿಧಾನದ 309ನೇ ಅನುಚ್ಛೇದದ ಉಪಬಂಧಗಳ ಅಡಿಯಲ್ಲಿ ಮತ್ತು ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 14, 32 ಮತ್ತು 41ನೇ ನಮೂದುಗಳ ಅಡಿಯಲ್ಲಿ ಹಾಗೂ IIIನೇ ಪಟ್ಟಿಯ 25ನೇ ನಮೂದಿನ ಅಡಿಯಲ್ಲಿ, ರಾಜ್ಯ ವಿಧಾನಮಂಡಲವು ಸಾರ್ವಜನಿಕ ಸೇವೆಗಳಿಗೆ ಹಾಗೂ ಕರ್ನಾಟಕ ಸರ್ಕಾರದ ಮಾಧ್ಯಮಗಳೊಂದಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕವಾದ ವ್ಯಕ್ತಿಗಳ ಸೇವಾಷರತ್ತುಗಳನ್ನು ಕಾನೂನಿನ ಮೂಲಕ ನಿಯಂತ್ರಿಸಬಹುದಾಗಿರುವುದರಿಂದ;

ರಾಜ್ಯ ಸರ್ಕಾರ ಅಥವಾ ಅನುದಾನಿತ ಕಾಲೇಜುಗಳು ಅಥವಾ ಸಂಸ್ಥೆಗಳ ಮೂಲಕ ನಿಯೋಜಿತರಾದ ಯುಜಿಸಿ/ಎಐಸಿಟಿಇ/ಐಸಿಎಆರ್ ಅಥವಾ ಮಾರ್ಪಡಿತ ಎಐಸಿಟಿಇ ವೇತನ ಶ್ರೇಣಿಗಳನ್ನು ಪಡೆಯುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಹುದ್ದೆಯೊಂದರಲ್ಲಿ ಕಾರ್ಯನಿರ್ವಹಿಸಲು ನೇಮಕವಾದ ಶಿಕ್ಷಕರೊಬ್ಬರು ಆ ಹುದ್ದೆಯ ಪೂರ್ವಭಾವ್ಯ ವೇತನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಮತ್ತು ಅಂಥ ಶಿಕ್ಷಕನ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳು, ನಿವೃತ್ತಿಯ ಅಥವಾ ವಯೋನಿವೃತ್ತಿಯ ಅಥವಾ ಸಂದರ್ಭಾನುಸಾರವಾಗಿ ಮರಣದ ಸಮಯದಲ್ಲಿ ನಿವೃತ್ತಿವೇತನದ ಮಂಜೂರಾತಿಯನ್ನು ನಿಯಂತ್ರಿಸುವ ಅನ್ವಯವಾಗುವ ನಿಯಮಗಳು/ ಆದೇಶಗಳಿಗನುಸಾರವಾಗಿ ನಿರ್ಧರಿಸಲಾಗುವುದರಿಂದ;

ಯುಜಿಸಿ/ಐಸಿಎಆರ್/ಎಐಸಿಟಿಇ ಅಥವಾ ಮಾರ್ಪಡಿತ ಎಐಸಿಟಿಇ ವೇತನ ಶ್ರೇಣಿಗಳ ನಿವೃತ್ತ ಶಿಕ್ಷಕರು ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಉಳಿದ ಸರ್ಕಾರಿ ನಿವೃತ್ತಿದಾರರಿಗೆ ತತ್ಸಮಾನರಾಗಿರುತ್ತಾರೆ. ಮುಂದುವರೆದು, ರಾಜ್ಯ ಸರ್ಕಾರವು ನಿರ್ವಹಿಸಿ ಅನುದಾನ ನೀಡುತ್ತಿರುವ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯುಜಿಸಿ/ಐಸಿಎಆರ್/ಎಐಸಿಟಿಇ ಅಥವಾ ಮಾರ್ಪಡಿತ ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಶಿಕ್ಷಕರು ಮತ್ತು ತತ್ಸಮಾನ ವೃಂದದ ಸಿಬ್ಬಂದಿಯ ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳನ್ನು ರಾಜ್ಯ ಸರ್ಕಾರದ ನಿಯಮಗಳ ಅನುಸಾರವಾಗಿ ನಿರ್ಧರಿಸತಕ್ಕದ್ದು ಎನ್ನುವುದು ಕೂಡಾ ರಾಜ್ಯ ಸರ್ಕಾರದ ಸ್ಥಾಪಿತ ನೀತಿಯಾಗಿರುತ್ತದೆ. ನಿವೃತ್ತಿ ವೇತನದ ಸಂಬಂಧದಲ್ಲಿ cut-off ದಿನಾಂಕವನ್ನು ವೇತನ ಪರಿಷ್ಕರಣೆಯ ಬಹುದೊಡ್ಡ ಹಣಕಾಸಿನ ತೊಡಕುಗಳು ಮತ್ತು ಕೇಂದ್ರ ಸರ್ಕಾರದ ಹಣಕಾಸಿನ ನೆರವು, ಮುಂತಾದವುಗಳು ಯಾವುದಾದರೂ ಇದ್ದಲ್ಲಿ ಅಂಥ ಇತರ ಸಂಬಂಧಪಟ್ಟ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಿರ್ಧರಿಸಲಾಗುವುದರಿಂದ;

ಪೂರ್ವಭಾವಿ ನೀತಿಯ ವಿಷಯದಂತೆ, ತರುವಾಯದ ವೇತನ ಪರಿಷ್ಕರಣೆಯ cut-off ದಿನಾಂಕಕ್ಕೆ ಮೊದಲು ನಿವೃತ್ತರಾದ ನಿವೃತ್ತ ಶಿಕ್ಷಕರ ನಿವೃತ್ತಿ ವೇತನವು, ರಾಜ್ಯ ಸರ್ಕಾರದ ನಿರ್ಧಾರದ ಅನುಸಾರವಾಗಿ ಸಂವಾದಿ ವೇತನ ಶ್ರೇಣಿಗಳ ಪರಿಷ್ಕರಣೆಯು ಜಾರಿಯಾದಾಗಲೆಲ್ಲಾ, ಮತ್ತಷ್ಟು ಪರಿಷ್ಕರಣೆಗೆ ಒಳಪಡಬೇಕಾಗಿರುವುದರಿಂದ;

ಉನ್ನತ ಶಿಕ್ಷಣದ ಸಂಬಂಧದಲ್ಲಿ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ರಾಜ್ಯ ಸರ್ಕಾರಕ್ಕೆ ಸಲಹಾ ಸಮಿತಿಯಾಗಿರುವುದು ಮತ್ತು ಉನ್ನತ ಶೈಕ್ಷಣಿಕ ಸಂಸ್ಥೆಗಳ ಶಿಕ್ಷಕರ ವೇತನ ಅಥವಾ ನಿವೃತ್ತಿ ವೇತನದ ಪರಿಷ್ಕರಣೆಯ ಕುರಿತು ಶಿಫಾರಸ್ಸು ಮಾಡಲು ಅಥವಾ ಸಲಹೆ ನೀಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ರ (2010ರ ಕರ್ನಾಟಕ ಅಧಿನಿಯಮ 26) ಅಡಿಯಲ್ಲಿ ಸದರಿ ಪರಿಷತ್ತಿಗೆ ಯಾವುದೇ ಅಧಿಕಾರವನ್ನು ನೀಡಲಾಗಿರುವುದಿಲ್ಲ. ಪರಿಷತ್ತಿನ ಯಾವುದೇ ಸೂಚನೆ ಅಥವಾ ಸಲಹೆಯು ರಾಜ್ಯ ಸರ್ಕಾರದ ಮೇಲೆ ಬದ್ಧಕಾರಿಯಾಗಿರುವುದಿಲ್ಲವಾದ್ದರಿಂದ;

ಸರ್ಕಾರವು ದಿನಾಂಕ:24.07.2015ರ ಸರ್ಕಾರಿ ಆದೇಶದಲ್ಲಿ, 01–01–2006ಕ್ಕೂ ಮೊದಲಿನ ನಿವೃತ್ತಿದಾರರಿಗೆ 2006ರ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸುವ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಶಿಫಾರಸ್ಸನ್ನು ತಿರಸ್ಕರಿಸಿದೆ. ರಿಟ್ ಪಿಟಿಷನ್ ಸಂಖ್ಯೆ:775–787/2015 (ಎಸ್–ಆರ್) ಮೂಲಕ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು ಸದರಿ ರಿಟ್ ಪಿಟಿಷನ್ ಅನ್ನು ಪುರಸ್ಕರಿಸಿ, ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ಈ ರೀತಿ ಅಭಿಪ್ರಾಯ ಪಟ್ಟಿರುವುದರಿಂದ, ಎಂದರೆ:–

> "The State is required to demonstrate that the case of the petitioners falls under Category II as enunciated by their Lordships in V.Kasturi (supra). The meaning of the words "permissible in law" in this context means the inherently differentiable separate classification in

law, projected as Category II in V. Kasturi (supra). The State has failed to point out that the fixing of cut-off date was inherently permissible under a specific provision of Law. No justifiable reason or rationale in fixing the cut-off date is provided by the State, except pointing out to the effective date fixed in the Government Order dated: 24.12.2009 of Government of India and communicated dated: 11.03.2010, issued by the Ministry of Human Resources Development. The artificial classification by fixing a cut-off date is nothing but creating a class with a class, which is not permissible. The law laid down in Nakara (supra) that the object sought to be achieved was not to create a class within a class, but to ensure that the benefits of pension were made available to all persons of the same class, continues to hold the field even to this date. The artificial classification sought to be made by the State does not satisfy the test of Article 14."

ಬಿ.ಜೆ.ಅಕ್ಕರ ಮತ್ತು ಇತರರು ವಿರುದ್ಧ ಭಾರತ ಸರ್ಕಾರ ಮತ್ತು ಇತರರು [(2006) 11 ಎಸ್‌ಸಿಸಿ 709] ಈ ವಿಷಯದಲ್ಲಿ ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿವೃತ್ತಿ ವೇತನ ನಿಗದಿ ಮತ್ತು ನಿವೃತ್ತಿ ವೇತನ ಮಂಜೂರಾತಿಯ ಕೆಲವು ಸುನಿಶ್ಚಿತವಾದ ತತ್ವಗಳನ್ನು ವಿವರಿಸಿದ್ದು, ಅದಕ್ಕನುಸಾರವಾಗಿ, ನಿರ್ದಿಷ್ಟ ದರ್ಜೆಯಲ್ಲಿ ನಿವೃತ್ತರಾಗುವ ಎಲ್ಲಾ ನಿವೃತ್ತಿದಾರರು ಎಲ್ಲಾ ಉದ್ದೇಶಗಳಿಗಾಗಿ ಏಕ ವರ್ಗವಾಗಿ ರೂಪುಗೊಳ್ಳುವುದಿಲ್ಲ. ವೇತನದ ವ್ಯತ್ಯಾಸದ ಹಿನ್ನೆಲೆಯಲ್ಲಿ ಅಥವಾ ಜಾರಿಯಲ್ಲಿರುವ ವಿವಿಧ ವೇತನ ಶ್ರೇಣಿಗಳ ಹಿನ್ನೆಲೆಯಲ್ಲಿ ನಿವೃತ್ತಿಯ ಸಮಯದಲ್ಲಿ ಸರಾಸರಿ ಲೆಕ್ಕಹಾಕಬಹುದಾದ ಉಪದಾನಗಳು ಇದ್ದಲ್ಲಿ ಒಂದೇ ದರ್ಜೆಯಲ್ಲಿ ನಿವೃತ್ತರಾದ ನಿವೃತ್ತಿದಾರರಿಗೆ ಒಂದೇ ತೆರನಾದ ನಿವೃತ್ತಿ ವೇತನವನ್ನು ನೀಡಬೇಕಾಗಿಲ್ಲ. ಮೇಲಿನ ಪ್ರಕರಣದಲ್ಲಿ ಮಾನ್ಯ ಅಪೆಕ್ಸ್ ನ್ಯಾಯಲಯವು ವಿವರಿಸಿದ ತತ್ವಗಳೂ ಕೂಡಾ ರಾಜ್ಯ ನೀತಿಯ ಅನುಸಾರವಾಗಿರುವುದರಿಂದ;

ಜಗದೀಶ್ ಪ್ರಸಾದ್ ಶರ್ಮಾ ಮತ್ತು ಇತರರು ವಿರುದ್ದ ಬಿಹಾರ ರಾಜ್ಯ ಮತ್ತು ಇತರರು ಇದರಲ್ಲಿ (2013) 8ಎಸ್‌ಸಿಸಿ 633ರಲ್ಲಿ ವರದಿಯಾದಂತೆ, ಅಪೆಕ್ಸ್ ನ್ಯಾಯಾಲಯವು ಯುಜಿಸಿ ವಿನಿಯಮಗಳು ರಾಜ್ಯದ ಮೇಲೆ ಸ್ವಯಂಚಾಲಿತವಾಗಿ ಬದ್ಧಕಾರಿಯಾಗಿರುವುದಿಲ್ಲ. ಯುಜಿಸಿ ವಿನಿಯಮಗಳು ಶಾಸನಬದ್ದ ಬಲವಿದ್ದಾಗ್ಯೂ ಅಂಥ ನಿಯಮಗಳು ರಾಜ್ಯದ ಸಮಗ್ರ ಅಧಿಕಾರವನ್ನು ಮೊಟಕುಗೊಳಿಸಲು ಸಾಧ್ಯವಿಲ್ಲವಾದ್ದರಿಂದ ಪ್ರಸ್ತುತ ವಾಸ್ತವತೆಯಲ್ಲಿ ಸನ್ನಿವೇಶವು ರಾಜ್ಯ ನೀತಿಯ ವ್ಯಾಪ್ತಿಯೊಳಗೆ ಬರುವುದರಿಂದ ಮತ್ತು ಜಗದೀಶ ಪ್ರಸಾದ್ ಶರ್ಮಾ ಪ್ರಕರಣದಲ್ಲಿ ಉಲ್ಲೇಖಿಸಿದಂತೆ ಅನುಸರಿಸುವಲ್ಲಿ 01.01.2006ಕ್ಕೂ ಮೊದಲು ನಿವೃತ್ತರಾಗಿರುವ ಶಿಕ್ಷಕರಿಗೆ ಪರಿಷ್ಕೃತ ನಿವೃತ್ತಿ ವೇತನ ಪ್ರಯೋಜನಗಳನ್ನು ವಿಸ್ತರಿಸಲಾಗುವುದಿಲ್ಲ ಎಂಬುದು ರಾಜ್ಯದ ನೀತಿ ನಿರ್ಣಯವಾಗಿರುವುದರಿಂದ;

ಕೇಂದ್ರ ಸರ್ಕಾರವು ದಿನಾಂಕ: 11.03.2010ರ ಪತ್ರದಲ್ಲಿ 01.01.2006ಕ್ಕೂ ಮೊದಲು ನಿವೃತ್ತರಾದ ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಯುಜಿಸಿ ವೇತನ ಶ್ರೇಣಿಯಲ್ಲಿರುವ ಶಿಕ್ಷಕರಿಗೆ ದಿನಾಂಕ: 11.03.2010ರ ಪತ್ರದಲ್ಲಿ ಉದ್ದೇಶಿಸಿರುವಂತೆ ನಿವೃತ್ತಿ ವೇತನ ಸ್ವರೂಪದ ಪರಿಷ್ಕರಣೆಯ ಪ್ರಯೋಜನವನ್ನು

ನೀಡುವುದು ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿರುವುದಿಲ್ಲ ಎಂಬುದಾಗಿ ಸೂಚಿಸಿರುತ್ತದೆ ಹಾಗೂ ಅಂತೆಯೇ ರಾಜ್ಯ ಸರ್ಕಾರಕ್ಕೆ ನಿಹಿತವಾಗಿರುವ ವಿವೇಚನಾ ಅಧಿಕಾರಗಳ ಅನುಸಾರವಾಗಿ ಭಾರತ ಸರ್ಕಾರದ ದಿನಾಂಕ: 11.03.2010ರ ಪತ್ರದಂತೆ ಪ್ರಯೋಜನಗಳನ್ನು ನೀಡಲಾಗುವುದಿಲ್ಲವೆಂದು ತೀರ್ಮಾನಿಸಲಾಗಿರುವುದರಿಂದ;

ಭಾರತ ಒಕ್ಕೂಟ ವಿರುದ್ಧ ಎಸ್.ಠಾಕೂರ್ [(2009)(1) ಎನ್‌ಸಿಸಿ (ಎಲ್ & ಎಸ್) 329] ಪ್ರಕರಣದಲ್ಲಿ ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯವು ಹೇಳಿರುವಂತೆ **"**ಸ್ವೀಕಾರಾರ್ಹ ಪರಿಷ್ಕೃತ ವೇತನ ಶ್ರೇಣಿಯ ಮೇಲೆ ತೀರ್ಮಾನಿಸುವುದು ಕಾರ್ಯಾಂಗದ ಪ್ರಕಾರ್ಯವಾಗಿದೆ ಹಾಗೂ ಅಂಥ ಆಡಳಿತಾತ್ಮಕ ತೀರ್ಮಾನದ ನ್ಯಾಯಿಕ ಪುನರಾವಲೋಕನದ ವ್ಯಾಪ್ತಿಯು ಸೀಮಿತವಾಗಿದೆ**"**. ಮುಂದುವರೆದು, ಭಾರತ ಒಕ್ಕೂಟ ವಿರುದ್ಧ ಮಾಣಿಕ್ ಲಾಲ್ ಬ್ಯಾನರ್ಜಿ [2006 ಎಸ್‌ಸಿಸಿ (ಎಲ್ & ಎಸ್) 1959] ಪ್ರಕರಣದಲ್ಲಿ ಮಾನ್ಯ ಅಪೆಕ್ಸ್ ನ್ಯಾಯಾಲಯವು ಹೇಳಿರುವಂತೆ ವೇತನಶ್ರೇಣಿಯನ್ನು ಪರಿಷ್ಕರಿಸುವಾಗ ಹಣಕಾಸು ತೊಡಕಿನ ಆಧಾರದ ಮೇಲೆ cut-off ದಿನಾಂಕವನ್ನು ನಿಗದಿಪಡಿಸುವುದು ಪ್ರಮುಖ ಅಂಶವಾಗಿರುವುದರಿಂದ;

ತರುವಾಯದ ವೇತನ ಪರಿಷ್ಕರಣೆಯ ಆಧಾರದ ಮೇಲೆ ಪೂರ್ವಾನ್ವಯವಾಗಿ ನಿವೃತ್ತಿ ವೇತನ ಮಂಜೂರಾತಿ ಅಥವಾ ನಿವೃತ್ತಿ ವೇತನ ನಿರ್ಧರಣೆಯು ರಾಜ್ಯದ ನೀತಿಗೆ ವಿರುದ್ಧವಾಗಿದೆ ಮತ್ತು ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ವಿರುದ್ಧವಾಗಿದೆ. ತರುವಾಯದ ವೇತನ ಪರಿಷ್ಕರಣೆಯ ಆಧಾರದ ಮೇಲೆ ಪೂರ್ವಾನ್ವಯವಾಗಿ ನಿವೃತ್ತಿ ವೇತನವನ್ನು ಹೆಚ್ಚಿಸಿ ಮಂಜೂರು ಮಾಡುವ ಯಾವುದೇ ತಿರ್ಮಾನವು ರಾಜ್ಯ ಸರ್ಕಾರದ ನೀತಿಯಲ್ಲಿ ಇರುವುದಿಲ್ಲ. ತರುವಾಯದ ವೇತನ ಪರಿಷ್ಕರಣೆಯ ದಿನಾಂಕದಂದು ಸೇವೆಯು ಕೊನೆಗೊಳ್ಳಬೇಕಾದ ಶಿಕ್ಷಕರು ಅವರದೇ ಆದ ಪ್ರತ್ಯೇಕ ವರ್ಗವನ್ನು ರಚಿಸಿಕೊಳ್ಳುವರು. ತರುವಾಯದಲ್ಲಿ ವೇತನ ಪರಿಷ್ಕರಿಸಲಾದ ಶಿಕ್ಷಕರೊಂದಿಗೆ ಅವರನ್ನು ಸಮೀಕರಿಸಲು ಸಾಧ್ಯವಾಗುವುದಿಲ್ಲ. ಮುಂದುವರೆದು, ಇದು ದೊಡ್ಡ ಮೊತ್ತಗಳ ಹಣ ಪಾವತಿಯನ್ನು ಒಳಗೊಂಡಿರುವುದು ಹಾಗೂ ರಾಜ್ಯ ಬೊಕ್ಕಸಕ್ಕೆ ಹೆಚ್ಚಿನ ಹಣಕಾಸು ಹೊರೆಯನ್ನು ಉಂಟುಮಾಡುವುದರಿಂದ;

ಮತ್ತು ಯುಜಿಸಿ/ಐಸಿಎಆರ್/ಎಐಸಿಟಿಇ ಹಾಗೂ ಮಾರ್ಪಡಿತ ಎಐಸಿಟಿಇ ವೇತನ ಶ್ರೇಣಿಗಳ ಪರಿಷ್ಕರಣೆಗೂ ಮೊದಲು ನಿವೃತ್ತರಾದ ಶಿಕ್ಷಕರಿಗೆ ನಿವೃತ್ತಿ ವೇತನ ನಿಗದಿ ಮತ್ತು ನಿವೃತ್ತಿ ವೇತನ ಸೌಲಭ್ಯಗಳನ್ನು ಮಂಜೂರು ಮಾಡುವಲ್ಲಿನ ಗೊಂದಲವನ್ನು ಬಗೆಹರಿಸುವುದು ಯುಕ್ತವಾಗಿರವುದರಿಂದ ಮತ್ತು ಅಗತ್ಯವಾಗಿರುವುದರಿಂದ;

ಕರ್ನಾಟಕ ರಾಜ್ಯ ವಿಧಾನಸಭೆ ಮತ್ತು ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಶ್ರೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧ್ಯಾದೇಶವನ್ನು ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) 2, 3, 4, 5, 6 ಮತ್ತು 12ನೇ ಪ್ರಕರಣಗಳು 1ನೇ ಜನವರಿ 1986ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಉಳಿದ ಉಪಬಂಧಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧ್ಯಾದೇಶದಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು:–

(i) **"ಐಐಸಿಟಿಇ"** ಎಂದರೆ ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987ರ (1987ರ ಕೇಂದ್ರ ಅಧಿನಿಯಮ 52) ಅಡಿಯಲ್ಲಿ ಸ್ಥಾಪಿಸಿದ ಅಖಿಲ ಭಾರತ ತಾಂತ್ರಿಕ ಶಿಕ್ಷಣಾ ಪರಿಷತ್ತು;

(ii) **"ಕಾಲೇಜು"** ಯಾವುದೇ ವಿಶ್ವವಿದ್ಯಾಲಯ ಅಥವಾ ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಮೂಲಕ ನಿರ್ವಹಿಸುತ್ತಿರುವ ಅಥವಾ ಅನುಮೋದಿಸಿದ ಅಥವಾ ಸಂಯೋಜನೆಗೊಂಡ ಮತ್ತು ವಿಶ್ವವಿದ್ಯಾಲಯದ ಪರೀಕ್ಷೆಗೆ ಅಧ್ಯಯನ ಕೋರ್ಸುಗಳನ್ನು ಒದಗಿಸುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆ ಹಾಗೂ ರಾಜ್ಯ ಸರ್ಕಾರದ ಮೂಲಕ ಪ್ರಮುಖವಾಗಿ ಅಥವಾ ಭಾಗಶಃ ಅನುದಾನ ಪಡೆಯುತ್ತಿರುವ ಅಥವಾ ರಾಜ್ಯದ ನಿಯಂತ್ರಣದಲ್ಲಿರುವ ಸ್ವಾಯತ್ತ ಕಾಲೇಜುನ್ನು ಒಳಗೊಳ್ಳುವುದು ಮತ್ತು ಸರ್ಕಾರಿ/ ಅನುದಾನಿತ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಒಳಗೊಳ್ಳುವುದು;

(iii) "ಸಕ್ಷಮ ಪ್ರಾಧಿಕಾರ" ಎಂದರೆ ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಅಥವಾ ಅನುದಾನಿತ ಸಂಸ್ಥೆಗಳಲ್ಲಿನ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನವನ್ನು ನಿಯಂತ್ರಿಸಲು ಆದೇಶಗಳನ್ನು ಮಾಡುವುದಕ್ಕೆ ಸಕ್ಷಮವಾದ ರಾಜ್ಯ ಸರ್ಕಾರ ಅಥವಾ ಇತರ ಪ್ರಾಧಿಕಾರ;

(iv) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(v) "ಉನ್ನತ ಶಿಕ್ಷಣ ಸಂಸ್ಥೆಗಳು" ಎಂದರೆ ವೃತ್ತಿಪರ, ತಾಂತ್ರಿಕ ಅಥವಾ ಅನ್ಯತಾ ವಿಶ್ವವಿದ್ಯಾಲಯದ ಮೂಲಕ ನಿರ್ವಹಿಸುತ್ತಿರುವ ಅಥವಾ ವಿಶ್ವವಿದ್ಯಾಲಯದ ಸವಲತ್ತುಗಳಿಗೆ ಒಳಪಡುವ ಹಾಗೂ ಸಂಶೋಧನಾ ಅಧ್ಯಯನಗಳನ್ನು ಒಳಗೊಂಡ ಸಂಶೋಧನೆಗೆ ನೆರವಾಗುವ ಉನ್ನತ ಶಿಕ್ಷಣದ ಶೈಕ್ಷಣಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಸಂಸ್ಥೆ, ಅನುದಾನಿತ ಸಂಸ್ಥೆಗಳು ಮತ್ತು ರಾಜ್ಯದಿಂದ ಅನುದಾನ ಪಡೆಯುವ ಸಂಸ್ಥೆಗಳು;

(vi) "ಐಸಿಎಆರ್" ಎಂದರೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು;

(vii) "ವೇತನ" ಎಂದರೆ ಹುದ್ದೆಗೆ ಲಗತ್ತಾದ ಮೂಲ ವೇತನ ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ 8ನೇ ನಿಯಮದ (32)ನೇ ಖಂಡದಲ್ಲಿ ಹೇಳಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು ಆದರೆ ಯುಜಿಸಿ/ಐಸಿಎಆರ್/ಎಐಸಿಟಿಇ ಅಥವಾ ಸಂದರ್ಭಾನುಸಾರವಾಗಿ ಮಾರ್ಪಡಿತ ಎಐಸಿಟಿಇ ಸಂಬಂಧಿತ ಉಪಬಂಧಗಳ ಅಡಿಯಲ್ಲಿ ಮಂಜೂರಾದ ನಿವೃತ್ತಿ ವೇತನೇತರ ಭತ್ಯೆ(ಎನ್‌ಪಿಎ) ಮತ್ತು ಇತರ ವಿಶೇಷ ಭತ್ಯೆಗಳನ್ನು ಒಳಗೊಂಡಿರತಕ್ಕದ್ದಲ್ಲ;

(viii) "ನಿವೃತ್ತಿ ವೇತನ" ಎಂದರೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳ 8ನೇ ನಿಯಮದ (33)ನೇ ಖಂಡದಲ್ಲಿ ಅಥವಾ ಸಕ್ಷಮ ಪ್ರಾಧಿಕಾರದ ಮೂಲಕ ಹೊರಡಿಸಿದ ನಿವೃತ್ತಿ ವೇತನದ ಮಂಜೂರಾತಿಯನ್ನು ನಿರ್ವಹಿಸುವ ಸಂಬಂಧಿತ ನಿಯಮಗಳು ಅಥವಾ ಆದೇಶಗಳಲ್ಲಿ ಪರಿಭಾಷಿಸಿದ ನಿವೃತ್ತಿ ವೇತನ:

(ix) "ನಿಯಮಿಸಲಾದ" ಎಂದರೆ ಸರ್ಕಾರದ ಮೂಲಕ ಮಾಡಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(x) "ಪ್ರಾಂಶುಪಾಲ" ಎಂದರೆ ಯಾವುದೇ ಹೆಸರಿನಿಂದ ಕರೆಯಲಾಗುವ ಕಾಲೇಜು ಅಥವಾ ಸಂಸ್ಥೆಯ ಮುಖ್ಯಸ್ಥ:

(xi) "ಶಿಕ್ಷಕ" ಎಂದರೆ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ, ಉಪನ್ಯಾಸಕ, ಗ್ರಂಥಪಾಲಕರು, ರೀಡರ್ ಅಥವಾ ದೈಹಿಕ ಶಿಕ್ಷಣ ಸಿಬ್ಬಂದಿ ಎಂಬ ಯಾವುದೇ ಹೆಸರಿನಿಂದ ಕರೆಯಲಾಗುವ ಬೋಧಕ ಹುದ್ದೆಗಳ ಯಾವುದೇ ವರ್ಗಕ್ಕೆ ನೇಮಿಸಿದ ವ್ಯಕ್ತಿ ಮತ್ತು ಅನುಕ್ರಮವಾಗಿ ಯುಜಿಸಿ/ಐಸಿಎಆರ್/ಎಐಸಿಟಿಇ ಅಥವಾ ಮಾರ್ಪಡಿತ ಎಐಸಿಟಿಇ ವೇತನ ಶ್ರೇಣಿಯ ಹುದ್ದೆಯನ್ನು ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಾಂಶುಪಾಲ, ಅಥವಾ ಸಂಸ್ಥೆಯ ಮುಖ್ಯಸ್ಥರನ್ನು ಸೇರಿಕೊಂಡ ಎಲ್ಲಾ ಸಿಬ್ಬಂದಿಯನ್ನು ಒಳಗೊಳ್ಳುವುದು;

(xii) "ಯುಜಿಸಿ" ಎಂದರೆ ವಿಶ್ವವಿದ್ಯಾಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 03) ಅಡಿಯಲ್ಲಿ ಸ್ಥಾಪಿಸಿದ ವಿಶ್ವವಿದ್ಯಾಲಯ ಅನುದಾನಗಳ ಆಯೋಗ; ಮತ್ತು

(xiii) "ವಿಶ್ವವಿದ್ಯಾಲಯ" ಎಂದರೆ ರಾಜ್ಯ ವಿಧಾನಮಂಡಲದ ಕಾನೂನಿನ ಮೂಲಕ ಸ್ಥಾಪಿಸಿದ ವಿಶ್ವವಿದ್ಯಾಲಯ.

(2) ಈ ಅಧ್ಯಾದೇಶದಲ್ಲಿ ಬಳಸಿದ ಆದರೆ ಇಲ್ಲಿ ಮೇಲೆ ಪರಿಭಾಷಿಸದೇ ಇರುವ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಮತ್ತು ಅನ್ವಯವಾಗುವ ನಿವೃತ್ತಿವೇತನ ನಿಯಮಗಳು ಅಥವಾ ಆದೇಶಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಹೇಳಲಾದ ಅಂಥ ಅರ್ಥವನ್ನೇ ಹೊಂದಿರತಕ್ಕದ್ದು.

**3. ಶಿಕ್ಷಕರ ವೇತನ ಮತ್ತು ಭತ್ಯೆಗಳ ನಿಯಂತ್ರಣ.–** (1) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಶಿಕ್ಷಕನು ತಾನು ಕ್ರಮಬದ್ಧವಾಗಿ ನೇಮಕವಾದ ಹುದ್ದೆಗೆ ಲಗತ್ತಾದ ವೇತನ ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(2) ಶಿಕ್ಷಕರ ವೇತನ ನಿಯಂತ್ರಣವನ್ನು ವಿನಿಯಮಿಸುತ್ತಿರುವ ಸೇವಾನಿಯಮಗಳ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಪ್ರಾಧಿಕಾರದ ಆದೇಶಗಳ ಅನುಸಾರವಾಗಿ ಹಾಗೆ ನಿಯಂತ್ರಿಸತಕ್ಕದ್ದು ಆದರೆ ಭಾರತ ಸರ್ಕಾರ ಅಥವಾ ಭಾರತದ ಸಂಸತ್ತಿನ ಅಧಿನಿಯಮವು ಸ್ಥಾಪಿಸಿದ ಯಾವುದೇ ಇತರ ಕೇಂದ್ರ ಸರ್ಕಾರಿ ಸಂಸ್ಥೆಯು ಹೊರಡಿಸಿದ ವಿನಿಯಮಗಳ ಉಪಬಂಧಗಳ ಅಡಿಯಲ್ಲಿ ನಿಯಂತ್ರಿಸತಕ್ಕದ್ದಲ್ಲ:

ಪರಂತು, ಯಾವೊಬ್ಬ ನಿವೃತ್ತ ಶಿಕ್ಷಕನು, ಕ್ರೋಢೀಕೃತ ವೇತನ ಅಥವಾ ಕರಾರಿನ ಒಪ್ಪಂದ ಇತ್ಯಾದಿಯ ಮೇರೆಗೆ ಮರು ನೇಮಕಾತಿ ಅಥವಾ ನೇಮಕಾತಿಯಾಗಿದ್ದಲ್ಲಿ, ಆತನ ವೇತನ ಮತ್ತು ಭತ್ಯೆಗಳನ್ನು, ರಾಜ್ಯ ಸರ್ಕಾರದ ಅನ್ವಯವಾಗುವ ಸೇವಾ ನಿಯಮಗಳು ಅಥವಾ ಆದೇಶಗಳ ಮತ್ತು ಕರಾರಿನ ನೇಮಕಾತಿಯನ್ನು ನಿಯಂತ್ರಿಸುವ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು/ ಉನ್ನತ ಶೈಕ್ಷಣಿಕ ಸಂಸ್ಥೆಗಳ ಪರಿನಿಯಮಗಳು ಅಥವಾ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ಉನ್ನತ ಶೈಕ್ಷಣಿಕ ಸಂಸ್ಥೆಗಳ ಮೂಲಕವಾಗಿಯಾಗಲೀ ಮಾಡಿಕೊಂಡ ಯಾವುದೇ ಒಪ್ಪಂದದ ಅಡಿಯಲ್ಲಿ ನಿರ್ಧರಿಸತಕ್ಕದ್ದು.

**4. ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳ ನಿಯಂತ್ರಣ.–** (1) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಶಿಕ್ಷಕನ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳನ್ನು, ಗರಿಷ್ಠ ಮಿತಿಗೆ ಒಳಪಟ್ಟು, ಯಾವುದಾದರೂ ಇದ್ದಲ್ಲಿ, ಅವನ್ನು, ಕರ್ನಾಟಕ ನಾಗರಿಕ ಸೇವಾ ನಿಯಮಗಳು ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಪ್ರಾಧಿಕಾರವು ಕಾಲಕಾಲಕ್ಕೆ ಹೊರಡಿಸಿದ ಅನ್ವಯವಾಗುವ ನಿವೃತ್ತಿವೇತನ ನಿಯಮಗಳು ಮತ್ತು ಆದೇಶಗಳು, ಯಾವುದಾದರೂ ಇದ್ದಲ್ಲಿ, ಅದರೊಂದಿಗೆ ಓದಿಕೊಂಡಂತೆ ತ್ರಿಗುಣ ಪ್ರಯೋಜನ ಯೋಜನಾ ನಿಯಮಗಳ (Triple benefit scheme rules) ಉಪಬಂಧಗಳ ಅನುಸಾರವಾಗಿ

ನಿವೃತ್ತಿಯ ಅಥವಾ ವಯೋನಿವೃತ್ತಿಯ ಅಥವಾ ಸಂದರ್ಭಾನುಸಾರವಾಗಿ ಮರಣದ ದಿನಾಂಕಕ್ಕೆ ನಿಕಟ ಪೂರ್ವಕವಾಗಿ ಸೆಳೆದ ಕೊನೆಯ ವೇತನದ (Last pay drawn) ಅನುಸಾರವಾಗಿ ನಿರ್ಧರಿಸತಕ್ಕದ್ದು.

(2) ಸಕ್ಷಮ ಪ್ರಾಧಿಕಾರದ ಆದೇಶಗಳು ಅಥವಾ ನಿಯಮಗಳಲ್ಲಿ ವಿಧಿಸಲಾದ ಷರತ್ತುಗಳಿಗೆ ಒಳಪಟ್ಟು ಪೂರ್ವಾನ್ವಯವಾಗಿ ಪರಿಷ್ಕೃತ ವೇತನ ಶ್ರೇಣಿಗಳ ಪ್ರಯೋಜನವನ್ನು ವಿಸ್ತರಿಸುವ ಸದರಿ ನಿಯಮ ಅಥವಾ ಆದೇಶದ ಮೂಲಕವಾಗಿಯಾಗಲೀ ನಿವೃತ್ತ ಶಿಕ್ಷಕನ ವೇತನವು ಪೂರ್ವಾನ್ವಯವಾಗಿ ಪರಿಷ್ಕರಣೆಯಾದ ಹೊರತು ಒಮ್ಮೆ ನಿರ್ಧರಿತವಾದ ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನ ಪ್ರಯೋಜನಗಳು ಪರಿಷ್ಕರಣೆಗೆ ಒಳಪಡತಕ್ಕದ್ದಲ್ಲ:

ಪರಂತು, ನಿವೃತ್ತ ಶಿಕ್ಷಕನು, 5ನೇ ಪ್ರಕರಣದ ಅನುಸಾರವಾಗಿ ನಿವೃತ್ತಿ ವೇತನ ಅಥವಾ ನಿವೃತ್ತಿ ವೇತನ ಪ್ರಯೋಜನಗಳ ಪರಿಷ್ಕರಣೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**5. ಶಿಕ್ಷಕರ ನಿವೃತ್ತಿ ವೇತನ ಪರಿಷ್ಕರಣೆ.–** (1) ಕಾಲಕಾಲಕ್ಕೆ ವೇತನ ಆಯೋಗ ಅಥವಾ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ರಾಜ್ಯ ಸರ್ಕಾರವು ನಿವೃತ್ತಿ ವೇತನವನ್ನು ಪರಿಷ್ಕರಿಸಿದಾಗ ಮತ್ತು ಅದನ್ನು ಉನ್ನತ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡಾಗಲೆಲ್ಲಾ ಶಿಕ್ಷಕನು, ಈಗಾಗಲೇ ಇತ್ಯರ್ಥವಾದ ನಿವೃತ್ತಿ ವೇತನ ಸಂವಾದಿಯಾಗಿ ಪರಿಷ್ಕರಣೆಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ವೇತನ ಶ್ರೇಣಿಯ ಪರಿಷ್ಕರಣೆಯ ಮೇರೆಗೆ 4ನೇ ಪ್ರಕರಣದ (1)ನೇ ಪ್ರಕರಣದ ಅನ್ವಯ ಇತ್ಯರ್ಥವಾದ ನಿವೃತ್ತಿ ವೇತನವನ್ನು ಪಡೆಯುವ ನಿವೃತ್ತ ಶಿಕ್ಷಕನು, ಪರಿಷ್ಕೃತ ವೇತನ ಶ್ರೇಣಿಗಳ ಅನುಷ್ಠಾನದ ತರುವಾಯ ನಿವೃತ್ತನಾದ ಶಿಕ್ಷಕನಿಗೆ ಮಾತ್ರವೇ ವಿಸ್ತರಿಸಲಾದ ಹೊಸ ಪರಿಷ್ಕೃತ ವೇತನ ಶ್ರೇಣಿಯಲ್ಲಿ, ತಾನು ಸೆಳೆದ ಕೊನೆಯ ವೇತನದ ಪರಿಷ್ಕರಣಕ್ಕೆ ಹಕ್ಕುಳ್ಳವನಾಗತಕ್ಕದ್ದಲ್ಲ.

**6. ವ್ಯವಹರಣೆಗಳ ಸಿಂಧುತ್ವ ಮತ್ತು ಕ್ಲೇಮುಗಳ ರದ್ದತಿ.–** ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಈ ಅಧ್ಯಾದೇಶದ ಪ್ರಾರಂಭಕ್ಕೆ ಮೊದಲು ಯುಜಿಸಿ/ಐಸಿಎಆರ್/ಎಐಸಿಟಿಇ ಅಥವಾ ಮಾರ್ಪಡಿತ ಎಐಸಿಟಿಇ ವೇತನ ಶ್ರೇಣಿಯ ಕುರಿತು ಶಿಕ್ಷಕರಿಗೆ ವೇತನ, ನಿವೃತ್ತಿ ವೇತನ ಅಥವಾ ನಿವೃತ್ತಿ ವೇತನ ಪ್ರಯೋಜನಗಳನ್ನು ನಿಯಂತ್ರಿಸುವ ಸಕ್ಷಮ ಪ್ರಾಧಿಕಾರವು ಮಾಡಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಆದೇಶ ಅಥವಾ ಅಧಿಸೂಚನೆಯ ಉಪಬಂಧಗಳೊಂದಿಗೆ ಸಕ್ಷಮ ಪ್ರಾಧಿಕಾರವು ಮಾಡಿದ ಅಥವಾ ಕೈಗೊಂಡ ಕ್ರಮವು ಈ ಅಧ್ಯಾದೇಶದ ಉಪಬಂಧಗಳಿಗೆ ವಿರುದ್ಧವಾಗದಿರುವಷ್ಟರ ಮಟ್ಟಿಗೆ ಈ ಅಧ್ಯಾದೇಶದ ಉಪಬಂಧಗಳ ಅಡಿಯಲ್ಲಿ ಸಿಂಧುವಾಗಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು; ಮತ್ತು

(ಬಿ) ಈ ಅಧ್ಯಾದೇಶದ ಉಪಬಂಧಗಳಿಗೆ ವಿರುದ್ಧವಾಗಿ ಯಾವುದೇ ನ್ಯಾಯಾಲಯವು ಯಾವೊಬ್ಬ ವ್ಯಕ್ತಿಗೆ ಮಂಜೂರು ಮಾಡಿದ ನಿವೃತ್ತಿ ವೇತನ ಅಥವಾ ನಿವೃತ್ತಿ ವೇತನ ಪ್ರಯೋಜನಗಳ ಕುರಿತಾದ ಯಾವುದೇ ಪರಿಹಾರವು ರದ್ದುಗೊಳ್ಳತಕ್ಕದ್ದು ಹಾಗೂ ಹೊಸ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸಲು ವಯೋನಿವೃತ್ತಿ ಅಥವಾ ಮರಣದ ಸಮಯದಲ್ಲಿ ಚಾಲ್ತಿಯಲ್ಲಿರುವ ವೇತನ ಶ್ರೇಣಿಯಲ್ಲಿ ಕೊನೆಯದಾಗಿ ಸೆಳೆದ ವೇತನವನ್ನು ಪರಿಗಣಿಸಿ ಈಗಾಗಲೇ ಇತ್ಯರ್ಥಗೊಳಿಸಿದ ನಿವೃತ್ತಿ ವೇತನ ಪರಿಷ್ಕರಣೆಗಾಗಿ ಶಿಕ್ಷಕನು ಮಾಡಿದ ಯಾವುದೇ ಕ್ಲೇಮು ರದ್ದುಗೊಳ್ಳತಕ್ಕದ್ದು ಮತ್ತು ಅದಕ್ಕನುಸಾರವಾಗಿ,–

(i) ವೇತನ ಶ್ರೇಣಿಗಳಲ್ಲಿ ಹೊಸ ಪರಿಷ್ಕರಣೆಯ ಆಧಾರದ ಮೇಲೆ ಯಾವುದೇ ಶಿಕ್ಷಕನ ನಿವೃತ್ತಿ ವೇತನ ಪರಿಷ್ಕರಣೆ ಕ್ಲೇಮಿಗೆ ಸರ್ಕಾರದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ದಾವೆ ಅಥವಾ ಇತರೆ ವ್ಯವಹರಣೆಗಳನ್ನು ನಿರ್ವಹಿಸತಕ್ಕದ್ದಲ್ಲ ಮತ್ತು ಮುಂದುವರೆಸತಕ್ಕದ್ದಲ್ಲ.

(ii) ವೇತನ ಶ್ರೇಣಿಗಳ ಪರಿಷ್ಕರಣೆ ಹಾಗೂ ಶಿಕ್ಷಕನ ನಿವೃತ್ತಿ ವೇತನವನ್ನು ಪೂರ್ವಾನ್ವಯವಾಗಿ ಪರಿಷ್ಕರಿಸುವಂತೆ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ನ್ಯಾಯಾಲಯವು ಜಾರಿಗೊಳಿಸತಕ್ಕದ್ದಲ್ಲ.

7. **ಪುನರೀಕ್ಷಣೆ.–** ರಾಜ್ಯ ಸರ್ಕಾರವು, ತಾನಾಗಿಯೇ ಆಗಲಿ ಅಥವಾ ಅರ್ಜಿಯ ಮೂಲಕವಾಗಿಯಾಗಲೀ, ವಾಸ್ತವಾಂಶದ ಅಥವಾ ಕಾನೂನಿನ ತಪ್ಪು ಅಥವಾ ಕಾನೂನಿನ ಅಜ್ಞಾನದ ಪ್ರಕರಣಗಳು ಸೇರಿದಂತೆ ಶಿಕ್ಷಕರಿಗೆ ಅನ್ವಯವಾಗುವ ಸೇವಾ ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿ ವೇತನ ಮತ್ತು ನಿವೃತ್ತಿ ವೇತನ ನಿಗದಿ ಪಡಿಸುವುದನ್ನು ರಾಜ್ಯ ಸರ್ಕಾರವು ಪುನರೀಕ್ಷಿಸಿ ಕಾನೂನಿಗನುಸಾರವಾಗಿ ವೇತನ ಅಥವಾ ನಿವೃತ್ತಿ ವೇತನ ಅಥವಾ ಎರಡನ್ನೂ ಮರು ನಿಗದಿಪಡಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬಹುದು. ಆದಾಗ್ಯೂ ನಿವೃತ್ತಿ ವೇತನದ ನಿಗದಿ ಪಡಿಸುವಿಕೆಯು ಐದು ವರ್ಷಗಳು ಅಥವಾ ಹೆಚ್ಚಿನ ಸಮಯದ ಹಿಂದಕ್ಕೆ ಸಂಬಂಧಿಸಿದ್ದಾದಲ್ಲಿ, ಅಥವಾ ಮರುವಸೂಲಾತಿಯು ನಿವೃತ್ತಿದಾರರಿಗೆ ಅನುಚಿತ ತೊಂದರೆಯನ್ನು ಉಂಟುಮಾಡುತ್ತದೆ ಎಂದು ರಾಜ್ಯ ಸರ್ಕಾರವು ಮನಗಂಡಲ್ಲಿ ಯಾವುದೇ ಹಿಂಬಾಕಿಗಳನ್ನು ವಸೂಲು ಮಾಡತಕ್ಕದ್ದಲ್ಲ.

8. **ಅಧಿಕಾರಗಳ ಪ್ರತ್ಯಾಯೋಜನೆ.–** 13ನೇ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು, ಈ ಅಧ್ಯಾದೇಶದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾದ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ ಅಂಥ ಅಧಿಕಾರಿ ಅಥವಾ ಅದರ ಅಧೀನದಲ್ಲಿನ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

9. **ನಿರ್ದೇಶನಗಳನ್ನು ನೀಡಲು ಸರ್ಕಾರದ ಅಧಿಕಾರಗಳು.–** ಸರ್ಕಾರವು, ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣವನ್ನು ನಿರ್ವಹಿಸುವ ಸೇವಾ ನಿಯಮಗಳ ಅನ್ವಯಿಕ ಉಪಬಂಧಗಳೊಂದಿಗೆ ಓದಲಾದಂತೆ ಈ ಅಧ್ಯಾದೇಶದ ಉಪಬಂಧಗಳಿಗೆ ಒಳಪಟ್ಟು ಅದು ಅಗತ್ಯವೆಂದು ಭಾವಿಸುವ ವೇತನ ಮತ್ತು ನಿವೃತ್ತಿ ವೇತನ ನಿಗದಿಯ ಕಾನೂನು ಸಮ್ಮತತೆಯನ್ನು ಖಚಿತಪಡಿಸಿಕೊಂಡ ತರುವಾಯ ಕಾಲಕಾಲಕ್ಕೆ ನಿರ್ದೇಶನಗಳನ್ನು ಹೊರಡಿಸಬಹುದು.

10. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧ್ಯಾದೇಶದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ಸರ್ಕಾರದ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಧಿವಿಚಾರಣೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

11. **ತೊಂದರೆಗಳ ನಿವಾರಣೆ.–** (1) ಈ ಅಧ್ಯಾದೇಶದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಆ ತೊಂದರೆಯ ನಿವಾರಣೆಗಾಗಿ, ತಾನು ಅವಶ್ಯಕ ಮತ್ತು ಸಮಯೋಚಿತವೆಂದು ಕಂಡುಬರುವಂತೆ, ಈ ಅಧ್ಯಾದೇಶದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ಮೇಲೆ ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



12. **ಅಧ್ಯಾರೋಹಿ ಪರಿಣಾಮ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಡಿಕ್ರಿ ಅಥವಾ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಆದೇಶಗಳಲ್ಲಿ ಅಸಂಗತವಾದುದು ಏನೇ ಒಳಗೊಂಡಿದ್ದರೂ ಈ ಅಧ್ಯಾದೇಶದ ಉಪಬಂಧಗಳು ಪರಿಣಾಮವನ್ನು ಹೊಂದಿರತಕ್ಕದ್ದು.

13. **ನಿಯಮಗಳ ರಚನಾಧಿಕಾರ.–** (1) ಈ ಅಧ್ಯಾದೇಶದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧ್ಯಾದೇಶದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮಕ್ಕೆ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮದ ಆ ಮಾರ್ಪಾಟು ಅಥವಾ ರದ್ದತಿಯು ಅಧಿಸೂಚಿಸಿದ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟು ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಯಾವುದೇ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

14. **ತಾತ್ಕಾಲಿಕ ಉಪಬಂಧಗಳು.–** ಈ ಅಧ್ಯಾದೇಶದ ಪ್ರಾರಂಭಕ್ಕೆ ಮೊದಲು ಶಿಕ್ಷಕನ ವೇತನ, ಭತ್ಯೆಗಳು ಮತ್ತು ನಿವೃತ್ತಿ ವೇತನವನ್ನು ನಿಯಂತ್ರಿಸುತ್ತಿರುವ ಸಕ್ಷಮ ಪ್ರಾಧಿಕಾರವು ಹೊರಡಿಸಿದ ಯಾವುದೇ ನಿಯಮ, ಆದೇಶ ಅಥವಾ ಅಧಿಸೂಚನೆಯನ್ನು ಈ ಅಧ್ಯಾದೇಶದ ಉಪಬಂಧಗಳಿಗೆ ವಿರುದ್ಧವಾಗಿರದಷ್ಟರಮಟ್ಟಿಗೆ ಈ ಅಧ್ಯಾದೇಶದ ಅಡಿಯಲ್ಲಿ ಹೊರಡಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಈ ಅಧ್ಯಾದೇಶದ ಉಪಬಂಧಗಳ ಅಡಿಯಲ್ಲಿ ಮಾಡಲಾದ ನಿಯಮಗಳ ಮೂಲಕ ಅವುಗಳನ್ನು ಮಾರ್ಪಡಿಸುವವರೆಗೆ ಅಥವಾ ರದ್ದುಪಡಿಸುವವರೆಗೆ ಅವುಗಳು ಮುಂದುವರಿಯತಕ್ಕದ್ದು.

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE
Digitally signed by SUNIL GARDE
Date: 2020.01.17 18:04:23 +05'30'